Reg. No. : ....................................

Name : .......................................

**Code No. 7006**

**Second Year – JUNE 2017**
**SAY/IMPROVEMENT**

Time : 2 ½ Hours
Cool-off time : 15 Minutes

**Part – II**

## KANNADA

Maximum : 80 Scores

***General Instructions to Candidates :***

- There is a 'cool-off time' of 15 minutes in addition to the writing time of 2 ½ hrs.
- You are not allowed to write your answers nor to discuss anything with others during the 'cool-off time'.
- Read questions carefully before answering.
- All questions are compulsory and only internal choice is allowed.
- When you select a question, all the sub-questions must be answered from the same question itself.
- Electronic devices except non-programmable calculators are not allowed in the Examination Hall.

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- 15 ನಿಮಿಷಗಳ ಕೂಲ್ ಆಫ್ ಟೈಮ್ ನೀಡಲಾಗಿದೆ. ಉತ್ತರ ಬರೆಯಲು ಎರಡೂವರೆ ಗಂಟೆಗಳ ಕಾಲಾವಕಾಶವಿದೆ.
- ಕೂಲ್ ಆಫ್ ಟೈಮ್ ನಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲೀ ಇತರರೊಂದಿಗೆ ಚರ್ಚಿಸುವುದಾಗಲೀ ಮಾಡಬಾರದು.
- ಉತ್ತರಗಳನ್ನು ಬರೆಯುವುದಕ್ಕೆ ಮೊದಲು ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಓದಿರಿ.
- ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿವೆ. ಆಯ್ಕೆಗಳಿದ್ದರೆ ಯಾವುದಾದರೂ ಒಂದನ್ನು ಉತ್ತರಿಸತಕ್ಕದ್ದು.
- ನೀವು ಒಂದು ಪ್ರಶ್ನೆಯನ್ನು ಆಯ್ಕೆ ಮಾಡಿದಾಗ ಅದರದ್ದೇ ಆದ ಬಿಡಿ ಪ್ರಶ್ನೆಗಳನ್ನು ಉತ್ತರಿಸಬೇಕು.
- ನಾನ್ ಪ್ರೋಗ್ರಾಮೆಬಲ್ ಗಳ ಹೊರತು ಬೇರೆ ಯಾವುದೇ ಇಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಕೊಠಡಿಯೊಳಗೆ ತರಬಾರದು.

**(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.)**

1. 'ನೆರೆ' ಕಥೆಯ ಮೂಲ ಕರ್ತೃ ಯಾರು ?
(ಡಿ.ಎನ್. ಸುರೇಶ್, ಯು.ಆರ್. ಅನಂತಮೂರ್ತಿ, ತಗಳಿ ಶಿವಶಂಕರ ಪಿಳ್ಳೆ, ಎಂ.ಟಿ. ವಾಸುದೇವನಾಯರ್) **(Score : 1)**

2. ಕೆಳಗಿನವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆ ಯಾವುದು ?
(ಪೆರ್ಮರ, ಹಳೆಗನ್ನಡ, ಉತ್ತರೋತ್ತರ, ಧನಾಗಮ) **(Score : 1)**

3. 'ಪೆರ್ಚು' – ಇದರ ಅರ್ಥವನ್ನು ಗುರುತಿಸಿ ಬರೆಯಿರಿ.
(ಕೆಚ್ಚು, ಸಂಭಾವನೆ, ಹೆಚ್ಚು, ಹಿರಿಮೆ) **(Score : 1)**

4. 'ಅಪ್ಪನೂ ಒಲೆಯುರಿಯೂ' ಕವಿತೆಯನ್ನು ಯಾವ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ ?
(ಹಸಿರುವಾಣಿ, ಬಾಗಿಲಾಚೆಯ ಮೌನ, ಒಂದಿಷ್ಟು ಹಸಿಮಣ್ಣು, ಕಡಲಿಗೆಷ್ಟೊಂದು ಬಾಗಿಲು) **(Score : 1)**

**(5 ರಿಂದ 12 ರ ವರೆಗಿನ ಪ್ರಶ್ನೆಗಳನ್ನು ಸೂಚನೆಯಂತೆ ಉತ್ತರಿಸಿರಿ.)**

5. 'ಧನ' ಈ ಪದದ ಎರಡು ಪರ್ಯಾಯ ಪದಗಳನ್ನು ಬರೆಯಿರಿ. **(Score : 1)**

6. ಕಾರ್ಯ, ಶ್ರೀ – ಈ ಪದಗಳ ತದ್ಭವ ರೂಪವನ್ನು ಬರೆಯಿರಿ. **(Score : 1)**

7. ಶಶಿಮೌಳಿ – ಈ ಪದದ ಸಮಾಸವನ್ನು ಹೆಸರಿಸಿರಿ. **(Score : 1)**

8. ಮಡಿಯದಿಹುದಿಲ್ಲಿಲ್ಲ – ಈ ಪದವನ್ನು ವಿಂಗಡಿಸಿ ಬರೆಯಿರಿ. **(Score : 1)**

9. 'ತಲೆಯೆತ್ತಿ ನಿಲ್ಲು' – ಈ ನುಡಿಗಟ್ಟನ್ನು ಬಳಸಿಕೊಂಡು ಅರ್ಥಪೂರ್ಣವಾದ ವಾಕ್ಯವೊಂದನ್ನು ರಚಿಸಿರಿ. **(Score : 1)**

10. ಕನ್ನಡದಲ್ಲಿ ಮೂರನೇ ರಾಷ್ಟ್ರಕವಿ ಪುರಸ್ಕಾರಕ್ಕೆ ಭಾಜನರಾದವರು ಯಾರು ? **(Score : 1)**

11. 'ಶ್ರೀನಿವಾಸ' ಕಾವ್ಯನಾಮದಿಂದ ಪ್ರಖ್ಯಾತರಾದ ಕನ್ನಡದ ಸಾಹಿತಿ ಯಾರು ? **(Score : 1)**

12. ಭಾರತದ ಮೊದಲ ಪೂರ್ಣ ಪ್ರಮಾಣದ ಚಲನಚಿತ್ರ ಯಾವುದು ? **(Score : 1)**

**(13 ರಿಂದ 16 ರ ವರೆಗಿನ ಪ್ರಶ್ನೆಗಳನ್ನು ಸೂಚನೆಯಂತೆ ಉತ್ತರಿಸಿರಿ.)**

13. ಕೆಳಗೆ ಕೊಟ್ಟಿರುವ ಗದ್ಯಭಾಗದಲ್ಲಿ ಉಂಟಾಗಿರುವ ತಪ್ಪುಗಳನ್ನು ಸರಿಪಡಿಸಿ ಪುನಃ ಬರೆಯಿರಿ. **(Scores : 2)**

ನಾಯಿಗಳು ಅತ್ತ ಹೋದೊಡನೆ ಹಂದಿ ನಿರತಂಕವಾಗಿ ಒಡಿ ಕಾಡು ಸೇರಿತು. ಆದರೆ ಕೊಂಥ ಹೊತ್ತಿನೊಳಗೆ ತೋಠದ ಆಳುಗಲೂ ಗದ್ದೆ ಕೆಲಶ ಮಾಡುತ್ತಿದ್ಧವರೂ ದನಕಾಯುವ ರಾಮನೂ ಒಡೋಡುತ ಬಂದರು.

14. ಅನ್ನದ ಮಹತ್ವವನ್ನು ಸರ್ವಜ್ಞನು ಹೇಗೆ ನಿರೂಪಿಸಿದ್ದಾನೆ ? ಬರೆಯಿರಿ. **(Scores : 4)**

15. ಕೆಳಗೆ ಕೊಡಲಾದ ಪದ್ಯದ ಸಾಲಿಗೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿರಿ. **(Scores : 4)**

ಬಡವಂ ಬಲ್ಲಿದನಾಗನೇ ಹರಹರಾ ಶ್ರೀಚೆನ್ನ ಸೋಮೇಶ್ವರಾ

16. ಹಂದಿಮರಿಯ ಜೀವರಕ್ಷಣೆಯ ಸನ್ನಿವೇಶವನ್ನು ತೇಜಸ್ವಿಯವರು ವಿಶಿಷ್ಟವಾಗಿ ಚಿತ್ರಿಸಿದ್ದಾರೆ. ಅದನ್ನು ಸಂಗ್ರಹಿಸಿ ಅದರ ಸೊಗಸನ್ನು ಬರೆಯಿರಿ. **(Scores : 4)**

**(17 ರಿಂದ 24 ರ ವರೆಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ.)**

17. 'ಅವರವರ ದಾರಿ' ಕವನದ ಆಶಯವನ್ನು ವಿವರವಾಗಿ ಬರೆಯಿರಿ. **(Scores : 4)**

18. ಒಲೆ ಉರಿಸುವ ಅಪ್ಪನ ಸಾಂಪ್ರದಾಯಿಕ ಮನೋಭಾವ ಮತ್ತು ಅದಕ್ಕೆ ಮಗನ ಪ್ರತಿಕ್ರಿಯೆ ಇವುಗಳನ್ನು ಸಂಗ್ರಹಿಸಿ ನಿಮ್ಮ ಮಾತುಗಳಲ್ಲಿ ಬರೆಯಿರಿ. **(Scores : 4)**

19. 'ತಾಯಿ' ಕಥೆಯ ಹಿನ್ನೆಲೆಯಲ್ಲಿ ಅಬ್ಬಕ್ಕಳ ಪಾತ್ರವನ್ನು ಚಿತ್ರಿಸಿರಿ. **(Scores : 5)**

20. ಈ ಕೆಳಗಿನ ಪದ್ಯದ ಆಸ್ವಾದನ ಟಿಪ್ಪಣಿ ಬರೆಯಿರಿ. **(Scores : 5)**

ವೀರರಲ್ಲದೆ ಹಂದೆಗಳು ವಿತರಣಗುಣ
ಶೂರರಲ್ಲದೆ ಲೋಭಿಗಳು
ಸಾರಗುಣಗ್ರಾಹಿ ರಸಿಕರಲ್ಲದೆ ದುರ್ವಿ
ಕಾರಿಗಳಿಲ್ಲಾ ನೆಲದೊಳು

21. 'ಮಹಾಕಾವ್ಯಗಳ ಸ್ತ್ರೀಪಾತ್ರಗಳು' ಎಂಬ ವಿಷಯದ ಮೇಲೆ ನಡೆಯಲಿರುವ ವಿಚಾರಸಂಕಿರಣದಲ್ಲಿ ಮಂಡಿಸುವುದಕ್ಕಾಗಿ 'ಊರ್ಮಿಳಾ' ಕವನದ ಆಧಾರದಲ್ಲಿ 'ಸತಿ ಊರ್ಮಿಳೆ' ಎಂಬ ಶೀರ್ಷಿಕೆಯಲ್ಲಿ ಪ್ರಬಂಧವೊಂದನ್ನು ಬರೆಯಿರಿ. **(Scores : 5)**

22. 'ಸತತ ಪ್ರಯತ್ನದಿಂದ ಗೆಲುವು ಸುನಿಶ್ಚಿತ' ಎಂಬುದನ್ನು ಮೇರಿಕ್ಯೂರಿ ದಂಪತಿಗಳು ಸಾಧಿಸಿ ತೋರಿಸಿದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. **(Scores : 5)**

23. ದುರ್ಜನರ ಬಗೆಗೆ ಪುರಂದರದಾಸರ ಅಭಿಪ್ರಾಯವನ್ನು ಈ ಕೆಳಗಿನ ವಚನದೊಂದಿಗೆ ತುಲನೆ ಮಾಡಿರಿ. **(Scores : 5)**

ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ
ದುರ್ಜನರ ಸಂಗದೊಡನಾಟ ಬಚ್ಚಲಿನ
ರೊಚ್ಚಿನಂತಿಹುದು ಸರ್ವಜ್ಞ

24. ಊರಿಗೆ ಬಂದೆರಗಿದ ಅನಿರೀಕ್ಷಿತ ನೆರೆ ಚೇನ್ನ ಪರಯನ ಕುಟುಂಬವನ್ನು ಬಾಧಿಸಿದುದನ್ನು ಕತೆಗಾರ ನಿರೂಪಿಸಿದ ಬಗೆ ಹೇಗೆ ? ಚಿತ್ರಿಸಿರಿ. **(Scores : 5)**

**(25 ಮತ್ತು 26 ನೇ ಪ್ರಶ್ನೆಗಳಲ್ಲಿ ಒಂದೊಂದನ್ನು ಆಯ್ದು ಒಂದೂವರೆ ಪುಟಕ್ಕೆ ಮೀರದಂತೆ ಬರೆಯಿರಿ.)**

25. 'ತರುಣ ಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು' ಕಾವ್ಯಭಾಗದಲ್ಲಿ ಬರುವ ಪಾತ್ರಗಳ ತ್ಯಾಗ ಮನೋಭಾವವನ್ನು ವಿವರಿಸಿ ಬರೆಯಿರಿ.

**ಅಥವಾ**

'ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯು ಒಂದು ಸಿನಿಮಾದ ಪ್ರಧಾನ ಅಂಗಗಳಾಗಿವೆ' ಈ ಮಾತನ್ನು ಸಮರ್ಥಿಸಿ ಪ್ರಬಂಧವೊಂದನ್ನು ಬರೆಯಿರಿ. **(Scores : 8)**

26. 'ಬೂತಯ್ಯನ ಮಗ ಅಯ್ಯು' ಎಂಬ ಸಣ್ಣಕತೆಯೊಂದನ್ನು ಸಿನೆಮಾ ಮಾಡುವಲ್ಲಿ ಸಿದ್ಧಲಿಂಗಯ್ಯನವರ ಜಾಣ್ಮೆ ಹೇಗೆ ಕೆಲಸ ಮಾಡಿದೆ ಎಂಬುದನ್ನು ಪ್ರಬಂಧ ರೂಪದಲ್ಲಿ ಬರೆಯಿರಿ.

**ಅಥವಾ**

ಕುರುಕ್ಷೇತ್ರ ರಣಭೂಮಿಯಲ್ಲಿ ದುರ್ಯೋಧನನಿಗೆ ಧೃತರಾಷ್ಟ್ರ ಗಾಂಧಾರಿಯರು ನೀಡಿದ ಉಪದೇಶಗಳೇನು ? ಅದಕ್ಕೆ ದುರ್ಯೋಧನನ ಪ್ರತಿಕ್ರಿಯೆಯೇನು ? ಬರೆಯಿರಿ. **(Scores : 8)**

Sl.No. Code No.

HSE EXAMINATION- 2017- SAY

ANSWER KEY

SUBJECT : KANNADA (LANGUAGE) -II

7006

Time: $2^1/_2$ Hrs Total Marks: 80

| Q.No. | Answer/ Value Points | Score | Total |
|---|---|---|---|
| 1 | ತಗಳಿ ಶಿವಶಂಕರ ಪಿಳ್ಳೆ | 1 | 1 |
| 2 | ಹಳೆಗನ್ನಡ | 1 | 1 |
| 3 | ಹೆಚ್ಚು | 1 | 1 |
| 4 | ಕಡಲಿಗೆಷ್ಟೊಂದು ಬಾಗಿಲು | 1 | 1 |
| 5 | ಹಣ, ವಿತ್ತ | 1 | 1 |
| 6 | ಕಜ್ಜ, ಸಿರಿ | 1 | 1 |
| 7 | ಬಹುವ್ರೀಹಿ | 1 | 1 |
| 8 | ಮಡಿಯದೆ+ಇಹುದು+ಇಲ್ಲಿಲ್ಲ | 1 | 1 |
| 9 | ದಿನದಿಂದ ದಿನಕ್ಕೆ ಉಂಟಾಗುತ್ತಿರುವ ಪ್ರಗತಿಯಿಂದಾಗಿ ಜಾಗತಿಕ ಮಟ್ಟದಲ್ಲಿ ನಮ್ಮ ದೇಶವು ಇಂದು ತಲೆಯೆತ್ತಿ ನಿಲ್ಲುವಂತಾಗಿದೆ. | 1 | 1 |
| 10 | ಜಿ.ಎಸ್.ಶಿವರುದ್ರಪ್ಪ | 1 | 1 |
| 11 | ಮಾಸ್ತಿ ವೆಂಕಟೇಶ ಅಯ್ಯಂಗಾರ್ | 1 | 1 |
| 12 | ರಾಜಾ ಹರಿಶ್ಚಂದ್ರ | 1 | 1 |
| 13 | ನಾಯಿಗಳು ಅತ್ತ ಹೋದೊಡನೆ ಹಂದಿ ನಿರಾತಂಕವಾಗಿ ಓಡಿ ಕಾಡು ಸೇರಿತು. ಆದರೆ ಕೊಂಚ ಹೊತ್ತಿನೊಳಗೆ ತೋಟದ ಆಳುಗಳೂ ಗದ್ದೆ ಕೆಲಸ ಮಾಡುತ್ತಿದ್ದವರೂ ದನಕಾಯುವ ರಾಮನೂ ಓಡೋಡುತ ಬಂದರು. | 2 | 2 |
| 14 | ಸರಿಯಾಗಿ ಪ್ರಸ್ತಾರವನ್ನು ಹಾಕಿದ್ದರೆ<br>ಗಣಗಳನ್ನು ಸರಿಯಾಗಿ ವಿಭಜಿಸಿದ್ದರೆ<br>ಮತ್ತೇಭಕ್ರೀಡಿತ ಎಂದು ಛಂದಸ್ಸನ್ನು ಹೆಸರಿದ್ದರೆ | 2<br>1<br>1 | 4 |
| 15 | ಸತ್ಯಕ್ಕೆ ಮಿಗಿಲಾದುದಿಲ್ಲ, ಹುಸಿಮಾತು ಕೊನೆ ತನಕ ಉಳಿಯುವುದಿಲ್ಲ. ಮಾನವ ಬದುಕು ಶಾಶ್ವತವಲ್ಲ. ಈ ಮಾತುಗಳು ಎಷ್ಟು ಸತ್ಯವೋ ತಾಯಿಗಿಂತ ಹಿತವಾದವರಿಲ್ಲ ಎಂಬ ಮಾತು ಅಷ್ಟೇ ಸತ್ಯ. ಹಾಗೆಯೇ ಅನ್ನ ಬದುಕಿನ ಮೂಲ ಆಸರೆ. ಆದ ಕಾರಣ ಅನ್ನವು ದೇವರಿಗಿಂತಲೂ ಮಿಗಿಲು. | 4 | 4 |
| 16 | ಕಣ್ಣಿಗೆ ಬಿದ್ದ ಹಂದಿಮರಿಯನ್ನು ನಾಯಿ ಬೇಟೆಯಾಡಿದ ಬಗೆ- ಹಂದಿಮರಿಯು ನಾಯಿಗಳ ಕಿವಿ ಹರಿಯುವಂತೆ ಕಿರುಚಿ ಜೀವ ರಕ್ಷಣೆ ಮಾಡಿಕೊಂಡ ರೀತಿ- ಭಯದಿಂದ ಹಿಂದೆ ಸರಿದ ನಾಯಿಗಳು ಇತ್ಯಾದಿ ವಿವರಣೆಗಳು. | 4 | 4 |
| 17 | ಆಧುನಿಕ ಜೀವನಕ್ಕೆ ಮಾರುಹೋಗಿ ತಂದೆತಾಯಂದಿರಿಂದ ದೂರವಾದ ಮಕ್ಕಳು ಮತ್ತು ಅವರ ಯಾಂತ್ರಿಕ ಸಂಬಂಧಗಳು- ಪರಂಪರೆ ಮತ್ತು ಮೌಲ್ಯಗಳಿಗೆ ಒತ್ತು ನೀಡುವ ತಂದೆಯ ಸಿಡಿಮಿಡಿ- ದು:ಖವಿದ್ದರೂ ತಾಯಿಯ ಸಾಂತ್ವನದ ಮಾತು ಇತ್ಯಾದಿ ಅಂಶಗಳು | 4 | 4 |

| | | | |
|---|---|---|---|
| 18 | ಒಲೆಯುರಿಸಲು ಅಪ್ಪ ದಿನವಿಡೀ ಪಡುವ ಪ್ರಯತ್ನ- ಆ ಪ್ರಯತ್ನದ ಹಿಂದಿನ ಪರಿಸರ ಕಾಳಜಿ ಮತ್ತು ದುಡಿಮೆಯ ಮಹತ್ವ- ಎಲ್ಲವನ್ನು ವ್ಯಾವಹಾರಿಕವಾಗಿ ಕಾಣುವ ಮಗನ ನಿಲುವು- ಕೊನೆಯಲ್ಲಿ ಕವಯಿತ್ರಿ ಚಿತ್ರಿಸುವ ಅಪ್ಪನ ಶ್ರೇಷ್ಠ ವ್ಯಕ್ತಿತ್ವ ಇತ್ಯಾದಿ ವಿವರಗಳು. | 4 | 4 |
| 19 | ಮನೆ ಬಿಟ್ಟು ಹೋದ ಕರುಳ ಕುಡಿಯ ಬರವಿಗಾಗಿ ತುಡಿಯುವ ಅಬ್ಬಕ್ಕನ ಮನಸ್ಥಿತಿ ಮತ್ತು ಮಾತುಗಳು- ಮಗನ ಮೇಲಿನ ವ್ಯಾಮೋಹ ಹಾಗೂ ಆತನ ಮೇಲಿರುವ ವಾತ್ಸಲ್ಯದಿಂದ ಇಡೀ ಕತೆಯಲ್ಲಿ ವ್ಯಕ್ತವಾಗುವ ಅಬ್ಬಕ್ಕಳ ವ್ಯಕ್ತಿತ್ವದ ಹಿರಿಮೆಯನ್ನು ಬರೆದರೆ | 5 | 5 |
| 20 | ಕನ್ನಡನಾಡಿನ ವೈಭವ, ಸಂಪತ್ತು ಮತ್ತು ಸೌಂದರ್ಯಗಳನ್ನು ವರ್ಣಿಸುತ್ತ ಕವಿ ಕನ್ನಡನಾಡಿನಲ್ಲಿ ವೀರರಲ್ಲದೆ ಹೇಡಿಗಳಿಲ್ಲ, ಉದಾರಿಗಳಲ್ಲದೆ ಸ್ವಾರ್ಥಿಗಳಿಲ್ಲ, ಜ್ಞಾನಿಗಳಲ್ಲದೆ ಅರಸಿಕರಾಗಲೀ, ದುರಹಂಕಾರಿಗಳಾಗಲೀ ಇಲ್ಲ ಎಂಬ ಸೊಗಸಾದ ವರ್ಣನೆಯ ಅಶಯವನ್ನು ಬರೆದಿದ್ದರೆ | 5 | 5 |
| 21 | ಕವಿ ಕಯ್ಯಾರರು ಬರೆದ ಊರ್ಮಿಳಾ ಕವನವನ್ನು ಅನುಲಕ್ಷಿಸಿ ಕವಿ ಚಿತ್ರಿಸಿದ ಊರ್ಮಿಳೆಯ ಹಿರಿಮೆಯ ಕುರಿತು ಪ್ರಬಂಧ ಮಾದರಿಯಲ್ಲಿ ಉತ್ತರ ಬರೆದಿದ್ದರೆ<br>ಪೀಠಿಕೆ<br>ವಿಷಯ ನಿರೂಪಣೆ | 3<br>1<br>1 | 5 |
| 22 | ಹಲವು ಪರಿಮಿತಿಗಳ ನಡುವೆಯೂ ಹಲವು ಸಮಸ್ಯೆಗಳನ್ನು ಎದುರಿಸಿಯೂ ಮೇರಿಕ್ಯೂರಿ ತನ್ನ ಪತಿಯೊಂದಿಗೆ ಸೇರಿ ನಡೆಸಿದ ನಿರಂತರ ಪ್ರಯತ್ನ- ಸ್ಥಳದ ಅಭಾವ, ಆರ್ಥಿಕ ಅಡಚಣೆ, ಕೌಟುಂಬಿಕ ಸಮಸ್ಯೆಗಳನ್ನು ಮೆಟ್ಟಿ ನಿಂತ ಬಗೆ- ಗುರಿ ಸಾಧನೆಗೆ ಒತ್ತು ಕೊಟ್ಟ ದಂಪತಿಗಳ ಶ್ರಮ- ಇತ್ಯಾದಿ ವಿಚಾರಗಳನ್ನು ಒಳಗೊಂಡಿದ್ದರೆ | 5 | 5 |
| 23 | ಜಾಲಿಯ ಮರದಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲ. ನೆರಳು, ಹಣ್ಣು, ಹೂವುಗಳನ್ನು ಕೊಡದ ಜಾಲಿಮರದಂತೆ ದುರ್ಜನರ ಬದುಕು ವ್ಯರ್ಥ. ಈ ಆಶಯವನ್ನು ಕೊಡಲಾದ ಪ್ರಶ್ನೆಯೊಂದಿಗೆ ಹೋಲಿಸಿ ಉತ್ತರ ಬರೆದಿದ್ದರೆ | 5 | 5 |
| 24 | ನೆರೆಯಿಂದಾಗಿ ಚೇನ್ನ ಪರಯ ಮೂರು ದಿನಗಳಕಾಲ ಪಟ್ಟ ಕಷ್ಟನಷ್ಟಗಳು- ಕೊನೆಯಲ್ಲಿ ಆತನ ಗುಡಿಸಲು ನೀರುಪಾಲಾದ ಬಗೆ- ತನ್ನ ಕುಟುಂಬದ ಸದಸ್ಯರೊಂದಿಗೆ ದೋಣಿಯೇರಿ ರಕ್ಷಣೆ ಪಡೆದ ಚೇನ್ನ ಪರಯ –ಇತ್ಯಾದಿ ವಿಷಯಗಳಿದ್ದಲ್ಲಿ | 5 | 5 |
| 25 | ಈ ಕಾವ್ಯಭಾಗದಲ್ಲಿ ಬರುವ ಹರಿಶ್ಚಂದ್ರ, ಚಂದ್ರಮತಿ, ಮಂತ್ರಿ ಈ ಮೂವರ ಕರ್ತವ್ಯಪರತೆ, ಸಚ್ಚಾರಿತ್ರ್ಯ ಮತ್ತು ತ್ಯಾಗ ಗುಣಗಳ ಬಗೆಗೆ ವಿವರಿಸಿದ್ದಲ್ಲಿ<br>ಭಾಷೆ ಮತ್ತು ಶೈಲಿಗೆ | 6<br>2 | 8 |
| 25 | ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಸಿನಿಮಾದ ಪರಿಪೂರ್ಣತೆಗೆ ಸಹಾಯಕವಾಗುವ ಬಗೆ- ಉತ್ತಮ ಕಥೆಯ ಲಕ್ಷಣ, ಸ್ವರೂಪ- ಚಿತ್ರಕಥೆ ಬರೆಯುವವನ ಕರ್ತೃತ್ವ ಶಕ್ತಿ, ಪಾತ್ರಗಳ ಸ್ವಭಾವಕ್ಕನುಗುಣವಾಗಿ ಸಂಭಾಷಣೆ ಬರೆಯುವ ಕೌಶಲ್ಯ ಇತ್ಯಾದಿ ವಿವರಗಳನ್ನು ಬರೆದಿದ್ದರೆ<br>ಭಾಷೆ ಮತ್ತು ಶೈಲಿಗೆ | 6<br>2 | 8 |

3/3

| | | | |
|---|---|---|---|
| 26 | ಕಥೆಯ ಕಥಾಪಾತ್ರಗಳಿಗೆ ಜೀವ ಕೊಡಲು ಕಲಾವಿದರನ್ನು ಆಯ್ಕೆ ಮಾಡಿದ ಬಗೆ- ಚಿತ್ರೀಕರಣಕ್ಕಾಗಿ ಸೂಕ್ತ ಸ್ಥಳದ ಆಯ್ಕೆ- ಕಥೆಗಾರರ ಆಶಯ ಕೆಡದಂತೆ ಚಿತ್ರಕಥೆಯನ್ನು ಹೆಣೆದ ರೀತಿ- ಹಳ್ಳಿಯ ಬದುಕು ಸಿನಿಮದಲ್ಲಿ ಅಭಿವ್ಯಕ್ತಗೊಂಡ ರೀತಿ- ಒಟ್ಟಿನಲ್ಲಿ ಒಟ್ಟು ಸಿನಿಮದ ಯಶಸ್ವಿಗೆ ನಿರ್ದೇಶಕರ ಕೊಡುಗೆ ಇತ್ಯಾದಿ ಅಂಶಗಳು<br>ಭಾಷೆ ಮತ್ತು ಶೈಲಿಗೆ | 6<br>2 | 8 |
| 26 | ಕಾವ್ಯಭಾಗದ ಆಶಯವನ್ನು ಪ್ರಶ್ನೆಯ ಆಧಾರದಲ್ಲಿ ವಿವರಿಸರಬೇಕು- ಧೃತರಾಷ್ಟ್ರ ಗಾಂಧಾರಿಯರ ದು:ಖ ಮತ್ತು ಆತಂಕ- ಮುಂದಾಗಲಿರುವ ದುರಂತಗಳನ್ನು ಮನದಲ್ಲಿಟ್ಟು ಮರುಗಿ ಮಗನನ್ನು ಉಪದೇಶಿಸುವ ಬಗೆ- ದುರ್ಯೋಧನನ ಛಲದ ಮತುಗಳು ಮೊದಲಾದ ಅಂಶಗಳು<br>ಭಾಷೆ ಮತ್ತು ಶೈಲಿಗೆ | 6<br>2 | 8 |